ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 4, January-February, 2024, Pp. 55-58.
©*IIMRD*, Mysuru
www.iimrd.com

# ಆಧುನಿಕ ವಚನಕಾರ ಹರ್ಡೇಕರ ಮಂಜಪ್ಪ

**ಡಾ. ಸುಕನ್ಯಾ ಮಾಣಿಕರಾವ**

**ಸಾರಾಂಶ: (Abstract)**

*ಆಧುನಿಕ ವಚನ ಸಾಹಿತ್ಯದಲ್ಲಿ ಕರ್ನಾಟಕ ಗಾಂಧಿ ಎಂದೇ ಪರಿಚಿತರಾದವರು ಅಪ್ರತಿಮ ರಾಷ್ಟ್ರಭಕ್ತರು, ವೀರಶೈವ ಸಂಸ್ಕೃತಿ, ಧರ್ಮ, ರಾಷ್ಟ್ರೀಯತೆ, ಪತ್ರಿಕಾ ಬರಹ, ಹಿಂದೂ ಧರ್ಮ ಮಹಾ ಪುರುಷ ಚರಿತ್ರೆ ಕುರಿತಾಗಿ ಅವರು 83 ಗ್ರಂಥಗಳನ್ನು ಬರೆದಿದ್ದಾರೆ. ಅವರೊಬ್ಬ ಧೀಮಂತ ಬರಹಗಾರರು. ನಿಸ್ವಾರ್ಥ ಜೀವಿಗಳು, ಸಮಾಜಕ್ಕಾಗಿ, ಧರ್ಮಕ್ಕಾಗಿ ಹಾಗೂ ಸಮಾನತೆಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡ ಮಹಾನ್ ವ್ಯಕ್ತಿತ್ವ ಹೊಂದಿದ್ದರು. ಹರ್ಡೇಕರ್ ಮಂಜಪ್ಪನವರು ಆದ್ಯ ಆಧುನಿಕ ವಚನಕಾರರು. ಇವರು ಪ್ರಥಮವಾಗಿ ವಚನ ಸಂಕಲನವನ್ನು ಪರಿಚಯಿಸಿ ಇಂದಿನ ವಚನ ಸಾಹಿತ್ಯಕ್ಕೆ ಆಧುನಿಕ ರೂಪವನ್ನು ಕೊಟ್ಟಂತಹ ಬಹುದೊಡ್ಡ ಮಹನೀಯರು. ಅವರದು ಹೋರಾಟದ ಬದುಕು. ಇವರು ಹಲವಾರು ಕ್ಷೇತ್ರಗಳಲ್ಲಿ ಒಬ್ಬ ವ್ಯಕ್ತಿಯಾಗಿ ದುಡಿಯದೆ ಒಂದು ಶಕ್ತಿಯಾಗಿ ದುಡಿದರು.*

**ಮುಖ್ಯಪದಗಳು (Keywords):** ಆಧುನಿಕ ವಚನಕಾರರು, ಹರ್ಡೇಕರ್ ಮಂಜಪ್ಪ, ಕರ್ನಾಟಕದ ಗಾಂಧಿ, ವೀರಶೈವ.

**ಪೀಠಿಕೆ**

ದೇಶದ ಸ್ವಾತಂತ್ರಕ್ಕಾಗಿನ ಹೋರಾಟದಲ್ಲಿ ತಮ್ಮ ನಿಸ್ವಾರ್ಥ ಸೇವೆಯಿಂದ ಶಿಕ್ಷಣ, ಸಮಾಜ ಸೇವೆ, ವೈದ್ಯಕೀಯ ಮತ್ತು ಕರಕುಶಲ ಕಲೆಗಳಲ್ಲಿ ನುರಿತರಾದ ಹಲವಾರು ಮಂದಿ ಹೆಸರಾಗಿದ್ದಾರೆ. ಮಹಾತ್ಮ ಗಾಂಧೀಜಿಯವರ ನೇರ ಪ್ರಭಾವಕ್ಕೆ ಒಳಗಾದ ಕರ್ನಾಟಕದ ಹಲವಾರು ಮಹಾಪುರುಷರು ಮತ್ತು ಮಹಿಳೆಯರು ಕೂಡಾ ಇಂತಹ ಮಹನೀಯರ ಸಾಲಿನಲ್ಲಿ ಪ್ರಮುಖರಾಗಿದ್ದು ಅಂತಹವರಲ್ಲಿ ಎನ್. ಎಸ್. ಹರ್ಡೇಕರ್ ಮಂಜಪ್ಪ ಕೂಡ ಒಬ್ಬರು. ಹರ್ಡೇಕರ್ ಮಂಜಪ್ಪನವರು ಬನವಾಸಿಯಲ್ಲಿ ಫೆಬ್ರವರಿ 18, 1889ರಲ್ಲಿ ಜನಿಸಿದರು.

ಬರಹ ಪ್ರವೀಣರಾದ ಹರ್ಡೇಕರ್ ಮಂಜಪ್ಪನವರು ಮಕ್ಕಳಿಗೆ ಅರ್ಥವಾಗುವ ಹಾಗೆ ಪದ್ಯಗಳ ರಚನೆ ಮಾಡಿದ್ದಲ್ಲದೆ ಅವನ್ನು ಮಕ್ಕಳ ಮನೋಧರ್ಮಕ್ಕೆ ರುಚಿಸುವ ಹಾಗೆ ಹಾವಭಾವ ಪೂರಕವಾಗಿ ಬೋಧಿಸಿದರು. ಅವರಿಗೆ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳನ್ನು ಕಲಿಯಬೇಕೆಂಬ ಆಸೆ ಇದ್ದಿತಾದರೂ, ಆ ನಿಟ್ಟಿನಲ್ಲಿ ಗುರುಗಳನ್ನು ಪಡೆಯುವ ಸೌಲಭ್ಯ ಇಲ್ಲದಿದ್ದ ಕಾರಣಗಳಿಂದ ತಾವೇ ಸ್ವಯಂ ಆಚಾರ್ಯರಾಗಿ ಕಲಿಯಲಾರಂಭಿಸಿದರು.

*Please cite this article as:* *ಸುಕನ್ಯಾ ಮಾಣಿಕರಾವ* (2024). ಆಧುನಿಕ ವಚನಕಾರ ಹರ್ಡೇಕರ ಮಂಜಪ್ಪ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(4). ಪು.ಸಂ. 55–58.*

**ಆಧುನಿಕ ವಚನಕಾರರಾಗಿ ಹರ್ಡೇಕರ್ ಮಂಜಪ್ಪ**

ಹರ್ಡೇಕರ್ ಮಂಜಪ್ಪ ಅವರು 'ಬಸವ ಚರಿತೆ' ಮತ್ತು 'ಶರಣ ಬಸವೇಶ್ವರ ಚರಿತ್ರೆ'ಯನ್ನು ಬರೆದ ಮೊದಲಿಗರು. ಮಂಜಪ್ಪನವರು ಶಿಕ್ಷಕ ವೃತ್ತಿಯನ್ನು ಮಾಡಿ 'ಧನುರ್ಧಾರಿ' ಮತ್ತು 'ಶರಣ ಸಂದೇಶ' ಎರಡು ಪತ್ರಿಕೆಗಳನ್ನು ನಡೆಸಿದರು. ದಿವ್ಯವಾದಂಥ ಅನುಭವವನ್ನು ಪಡೆದರು ಇವರು ಆಧ್ಯಾತ್ಮಿಕ ಪ್ರೇರಣೆಗೆ ಒಳಗಾದಂತೆ ತಮ್ಮ ಧರ್ಮದ ಉದ್ಧಾರಕ್ಕಾಗಿ ಅವರ ಭಾವನೆಗಳನ್ನು ವಚನಗಳ ಮುಖಾಂತರ ಹೊರಹಾಕಿದರು. ಹರ್ಡೇಕರ ಮಂಜಪ್ಪ ತಮ್ಮನ್ನು 'ಜನ ಸೇವಕ' ನೆಂದು ಪರಿಭಾವಿಸಿಕೊಂಡು 'ಪ್ರಭುದೇವ' ಅಂಕಿತದಲ್ಲಿ 32 ವಚನವನ್ನು ಬರೆದಿದ್ದಾರೆ. 'ಜನಸೇವಕ'ನೆಂದು ತಮ್ಮನ್ನು ಅಂದುಕೊಳ್ಳುತ್ತಿರುವುದರಲ್ಲಿ ವಿನೀತ ಭಾವದಿಂದ ತಾತ್ಕಾಲಿಕ ಸಮಾಜಿಕ ಸಂದರ್ಭ ಮತ್ತು ಜೀವನ ಮೌಲ್ಯಗಳನ್ನು ತಾವು ಹೊಂದಿರುವ ಅಂಶವನ್ನು ಸ್ಪಷ್ಟಪಡಿಸಿದ್ದಾರೆ. ಆಧುನಿಕ ವಚನ ಸಾಹಿತ್ಯ ಚರಿತ್ರೆಯ ಆರಂಭಿಕ ಕಾಲಘಟ್ಟದಲ್ಲಿ ಮುಖ್ಯ ವಚನಕಾರರಾಗಿರುವ ಹರ್ಡೇಕರ ಮಂಜಪ್ಪನವರಿಗೆ ಒಂದು ಪ್ರತ್ಯೇಕ ಸ್ಥಾನ ಲಭ್ಯವಾಗುವುದು. ಅವರ ಸಾಮುದಾಯಿಕ ವ್ಯಕ್ತಿತ್ವದಿಂದ ತಮ್ಮ ಪೂರ್ವದ ಬಸವಣ್ಣನವರನ್ನು ತಮ್ಮ ಕಾಲದ ಮಹಾತ್ಮಾ ಗಾಂಧೀಜಿಯನ್ನು ಕ್ರಿಯಾಶೀಲನಾಗಿ ಧ್ಯಾನಿಸುತ್ತಿದ್ದ ಮಂಜಪ್ಪನವರು ಒಂದರ್ಥದಲ್ಲಿ ಎರಡು ವ್ಯಕ್ತಿತ್ವಗಳ ಪ್ರತಿನಿಧಿಯೆಂಬಂತೆ ಬದುಕಿದವರು. ಅವರು ವಚನಗಳಲ್ಲಿ ಬರುವ ಗುರುಸ್ತುತಿ, ಗುರುದರ್ಶನ, ಆತ್ಮವಿಮರ್ಶೆಗಳು, ಔಪಚಾರಿಕವಾದವುಗಳಲ್ಲ. ಸಾಮಾಜಿಕ ತೊಡಗಿಸಿಕೊಳ್ಳುವಿಕೆ ಇದು ಇಂಥ ಹಿನ್ನಲೆ, ಪ್ರೇರಣೆಗಳ ಜೊತೆಗೆ ತಮ್ಮ ತಾದಾತ್ಮ್ಯವನ್ನು ಸಾದರಗೊಳಿಸುವುದು.

***ಜನ ಸೇವಕರಿಗೆ–ತನು ವಂಚಿಸಿಕೊಂಡಡೆ***

***ತನ್ನ ಮರಣವಯ್ಯಾ***

***ಲೋಕ ಸೇವೆಗೆ ತನು ತ್ಯಾಗ ಮಾಡಿದೊಡೆ***

***ಅದು ಜೀವಿತವಯ್ಯಾ***

***ಕಬ್ಬು ನುಚ್ಚು ನುಚ್ಚಾಗಿದ್ದರೆ ರುಚಿಯುಂಟೆ;***

***ರುಚಿಯಿಲ್ಲದೆಡೆ ಕಬ್ಬಿನ ಘನತೆಯುಂಟೆ***

***ಇದು ಕಾರಣ ಪ್ರಭುದೇವ, ಜನಸೇವಕಂಗೆ***

***ಕಬ್ಬಿನಂತೆ ತನುವನೀವ ಒಲವಿತ್ತು ಬದುಕಿಸಯ್ಯ***

ಬಸವಾದಿ ಶರಣರ ಒಟ್ಟು ಬದುಕಿನ ಪ್ರಗತಿಪರ, ವೈಚಾರಿಕ ಚಿಂತನೆಗಳ ಸಾರಲೇಖವನ್ನು ಪ್ರತಿನಿಧಿಸುವಂಥಹ ಶಿವನು ಕಾಶಿರಾಮೇಶ್ವರಗಳಲ್ಲಿ ಇಲ್ಲವಲ್ಲಯ್ಯಾ, ವಿಷ್ಣು ವೃಂದಾವನ ಗಿರಿಗಳಲ್ಲಿ ಇಲ್ಲವಯ್ಯಾ, ಅಲ್ಲಾ ಮೆಕ್ಕಾದಲ್ಲಿ ಇಲ್ಲವಯ್ಯಾ, ಏಸು ಆಕಾಶದಲ್ಲಿ ಇಲ್ಲವಯ್ಯಾ, ದೇವರ ಸ್ಥಾವರದಲ್ಲಿ ಅರಸುವುದೇಕೆ, ಜಂಗಮದಲ್ಲಿ ಬೆಳಗುವುದಯ್ಯಾ, ಪ್ರಾಣಿಗಳ ಹೃದಯದಲ್ಲಿ ಕುಳಿತು ಕರೆವನಯ್ಯಾ, ದೇಹವೇ ದೇವಾಲಯವಯ್ಯಾ.. ಹೀಗೆ ಮಂಜಪ್ಪನವರು ಇತಿಮಿತಿಗಳನ್ನು ಅರ್ಥಮಾಡಿ ಕೊಂಡಿದ್ದ ಶರಣರ ಪ್ರಭುತ್ವದ ಪ್ರಮಾಣಿಕ ವ್ಯಕ್ತಿಗಳಾಗಿದ್ದರು. ಇವರು ಅಧುನಿಕ ವಚನ ಸಾಹಿತ್ಯಕ್ಕೆ ಹಾಕಿದ ಭದ್ರ ಬುನಾದಿ

ಅಪೂರ್ವವಾದದ್ದು. ಇವರ ವಚನಗಳಲ್ಲಿ ಸಮಾಜಿಕ ಕಳಕಳಿ, ತ್ಯಾಗಮನೋಭಾವ, ಲೋಕಾನುಭವ, ಶಿವಾನುಭವ, ಧರ್ಮ ಹಾಗೂ ಆಧ್ಯಾತ್ಮ ಕುರಿತು ವಿಷಯಗಳು ಅಭಿವ್ಯಕ್ತಗೊಂಡಿವೆ.

***ಧರ್ಮವು ಮನಕಲ್ಲದೆ ತನುವಿಗುಂಟೆ ಅಯ್ಯ***

***ಮನ ಭಿನ್ನವಿರುವ ಸಿರಿಧರ್ಮ ಭಿನ್ನವಾಗಿಪ್ಪುದು ಸಹಜ ನೋಡಾ***

***ಗೋವಿಗೆ ನಾನಾ ವರ್ಣಗಳಲ್ಲದೆ ಕ್ಷೀರಕೆ ನಾನ ವರ್ಣಗಳುಂಟೆ***

***ಧರ್ಮ ಭಿನ್ನವಾಗಿರ್ದೊಡೆ ದಯೆ ಭಿನ್ನವಾಗಿರಬಹುದೆ***

***ಪ್ರಭುದೇವಾ ಜನ ಸೇವಕಂಗೆ ಗೋವರ್ಣ ಕಾಣದೆ***

***ಕ್ಷೀರವೊಂದೇ ಕಾಣುವಂತೆ ಮಾಡಯ್ಯಾ***

ತ್ಯಾಗದಿಂದ ಕೂಡಿದ ಸೇವಾ ಮನೋಭಾವವನ್ನು ಹರ್ಡೇಕರ ಮಂಜಪ್ಪನವರು ಇಲ್ಲಿ ಮನಮುಟ್ಟುವಂತೆ ವ್ಯಕ್ತಪಡಿಸಿದ್ದಾರೆ. ಧರ್ಮ ಹಾಗೂ ಆಧ್ಯಾತ್ಮ ಕುರಿತು ಅವರ ಜಿಜ್ಞಾಸೆ, ಚಿಂತನೆ ಈ ಮೇಲಿನ ವಚನದಲ್ಲಿ ವ್ಯಕ್ತಗೊಂಡುದನ್ನು ಕಾಣುವೆವು. ಈ ಹಿನ್ನೆಲೆಯಲ್ಲಿ ಮಂಜಪ್ಪನವರು ಆಧುನಿಕ ವಚನ ಸಾಹಿತ್ಯದಲ್ಲಿ ಹಲವಾರು ವಚನಗಳನ್ನು ರಚಿಸಿ ಆಧುನಿಕ ವಚನ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಯು ಅಪಾರವಾದದ್ದು.

ಒಟ್ಟಾರೆಯಾಗಿ ಹರ್ಡೇಕರ್ ಮಂಜಪ್ಪ ಅವರು ಬಸವೇಶ್ವರರ ತತ್ವಗಳಲ್ಲಿ ಆಕರ್ಷಿತರಾದರು. ತಮ್ಮ ಪರಿಸರದಲ್ಲಿದ್ದ ಲಿಂಗಾಯತದಲ್ಲಿ ಅಷ್ಟೊಂದು ಪಂಗಡಗಳಿರುವುದು ಅವರನ್ನು ಆಶ್ಚರ್ಯಚಕಿತರನ್ನಾ ಗಿಸಿತು. ಲಿಂಗಾಯತ ಚಿಂತನೆಗಳು ಮತಧರ್ಮಗಳ ಗೋಡೆಗಳನ್ನು ಉರುಳಿಸಿ ಆ ಮೂಲಕ ಆಚರಣೆಗಳಲ್ಲಿದ್ದ ದುಷ್ಟ ಪದ್ಧತಿಗಳನ್ನು ಮತ್ತು ಮೂಢ ನಂಬಿಕೆಗಳನ್ನು ಹೋಗಲಾಡಿಸುವ ಮೂಲೋದ್ದೇಶವನ್ನು ಹೊಂದಿದ್ದ ಹಿನ್ನಲೆಯಲ್ಲಿ ಆ ಜನಾಂಗದಲ್ಲೂ ಪಂಗಡ, ಉಪಪಂಗಡಗಳು ಹುಟ್ಟಿಕೊಂಡಿದ್ದುದು ಅವರಿಗೆ ನುಂಗಲಾರದ ತುತ್ತಾಗಿತ್ತು. ಹೀಗಾಗಿ ಬಸವೇಶ್ವರರ ತತ್ವಗಳನ್ನು ಪ್ರಸ್ತುತ ಪಡಿಸುವ ಹಲವಾರು ಪುಸ್ತಿಕೆಗಳನ್ನು ಹೊರತಂದು ಅವನ್ನು ಉಚಿತವಾಗಿ ಹಂಚಿ ಆ ಜನಾಂಗವನ್ನು ಒಟ್ಟುಗೂಡಿಸುವ ಪ್ರಯತ್ನ ಮಾಡಿದರು. ಈ ಕಾರ್ಯದಲ್ಲಿ ಲಿಂಗಾಯತ ಧರ್ಮ ಸಹೃದಯಿಗಳಾದ ಧಾರವಾಡದ ಮುರುಘಾ ಮಠದ ಮೃತ್ಯುಂಜಯ ಸ್ವಾಮೀಜಿಯವರು ಹರ್ಡೇಕರ್ ಮಂಜಪ್ಪನವರಿಗೆ ಅಪಾರ ಬೆಂಬಲವಿತ್ತರು. ಹರ್ಡೇಕರ್ ಮಂಜಪ್ಪನವರ ಈ ಚಿಂತನೆಗಳಿಗೆ ಅನೇಕರು ಅನುಯಾಯಿಗಳಾಗಿ ಹೊರಹೊಮ್ಮಿದರು.

1911 ರಲ್ಲಿ ದಾವಣಗೆರೆಯಲ್ಲಿ ಮೃತ್ಯುಂಜಯ ಮಹಾಸ್ವಾಮಿಗಳವರ ಸಹಕಾರದೊಂದಿಗೆ ಶ್ರಾವಣ ಉಪನ್ಯಾಸಮಾಲೆ (ಸಾಮೂಹಿಕ ಭಜನೆ ಮತ್ತು ವ್ಯಾಖ್ಯಾನ ಕಾರ್ಯಕ್ರಮ) ಪ್ರಾರಂಭ. ಬಿಡುವಿನ ವೇಳೆಯಲ್ಲಿ ಧಾರ್ಮಿಕ ಪುಸ್ತಕಗಳ ಓದು, ಜ್ಞಾನಾರ್ಜನೆ, ಸಮಾಜಸೇವೆ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡ ಮಂಜಪ್ಪನವರು ಬ್ರಹ್ಮಚಾರಿಯಾಗಿಯೇ ಉಳಿದರು.

**ಪರಾಮರ್ಶನ/ಆಕರ ಗ್ರಂಥಗಳು**


- ಎಲ್ಲೇಗೌಡ ಬೆಸಗರಹಳ್ಳಿ. (2009). *ಆಧುನಿಕ ವಚನಕಾರರು.* ವಿನಯ ಪ್ರಕಾಶನ.

- ಹಂಸಕವಿ. (ಸಂ.) (2009). ಆಧುನಿಕ ವಚನಗಳು. ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ.
- ನಿಲಮ್ಮ ಕತ್ನಳ್ಳಿ. (1998). *ಆಧುನಿಕ ವಚನಸಾಹಿತ್ಯ*. ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ.
- ಪೂಜಾರ ವ್ಹಿ.ಜಿ. (2009). *ವಚನ ಸಾಹಿತ್ಯ ಸಮೀಕ್ಷೆ.* ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ.
- ನಾಗರಾಜ ಎಂ.ಜಿ. (1999). *ಆಧುನಿಕ ವಚನಸಿರಿ.* ಕನ್ನಡ ಸಾಹಿತ್ಯ ಪರಿಷತ್ತು.